ಶ್ರೀ ಎಂ. ಎಲ್. ಮುತ್ತಣ್ಣಪರ್.—ಈ ಬಗ್ಗೆ ಈಗಾಗಲೇ ಕಾರ್ಯಕ್ರಮ ಕೈಕೊಂಡಿದ್ದರೂ ಹಳದ ಒಂದು ವರ್ಷದಿಂದ ಈ ಕೆಲಸ ಆಗಿಲ್ಲ. ಆದಷ್ಟು ಬೇಗ ಇದನ್ನು ಮಾಡಿಕೊಡಬೇಕೆಂದು ತ್ತಾಯ ಪಡಿಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಆಲ್ಲಿ ಜಾಗ ಸಿಕ್ಕಿದ ತಕ್ಷಣ ಇದನ್ನು ಮಾಡಿಸಿಕೊಡುತ್ತೇನೆ.

ವಿಚಾರಣಾ ಆಯೋಗಗಳು

೧೮೦೫ ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗಂಂಡ್ಲುಪೇಟೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಂವರೇ ?

ಅ) ಸರ್ಕಾರವು ೧೯೮೩ ರಿಂದ ಸಾರ್ವಜನಿಕರ ವಿಷಯಂಕ್ಕೆ ಸಂಬಂಧಿಸಿದಂತೆ ಎಷ್ಟು ವಿಚಾರಣಾ ಆಯೋಗಗಳನ್ನು ರಚಿಸಿದೆ,

ಆ) ಅವುಗಳಲ್ಲಿ ಎಷ್ಟು ವಿಚಾರಣಾ ಆಯೋಗಗಳು ತಮ್ಮ ವರದಿಯಂನ್ನು ಸಲ್ಲಿಸಿವೆ,

ಇ) ಸ್ವೀಕೃತ ವರದಿಗಳ ಮೇಲೆ ಸರ್ಕಾರವು ತೆಗೆದುಕೊಂಡ ಕ್ರಮಂವೇನು,

ಈ) ಉಳಿದ ಆಯೋಗಗಳು ತಮ್ಮ ವರದಿಗಳನ್ನು ಸಲ್ಲಿಸದೇ ಇರುವುದಕ್ಕೆ ಕಾರಣವೇನು ಮತ್ತು ಇದರ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮವೇನು ?

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮಂಬ್ಯೆ ಮಂತ್ರಿಗಳು).—

ಅ) ೨೬

ಆ) ೨೦ ಆಯೋಗಗಳು ತಮ್ಮ ವರದಿಯನ್ನು ಸಲ್ಲಿಸಿವೆ.

ಇ) ಅನುಬಂಧದಲ್ಲಿ ತೋರಿಸಿದಂತೆ.

ಈ) ಉಳಿದ ಆಯೋಗಗಳು ವಿಚಾರಣೆಯಿನ್ನು ಪೂರ್ಣಗೊಳಿಸಲು ತುರ್ತು ಕ್ರಮಂಗಳನ್ನು ತೆಗೆದುಕೊಳ್ಳುತ್ತಿವೆ.

ಅನುಬಂಧ

ವಿಚಾರಣಾ ಆಯೋಗಗಳಂ ಸಲ್ಲಿಸಿದ ವರದಿಗಳ ಮೇಲೆ ಸರ್ಕಾರವು ತೆಗೆದುಕೊಂಡ ಕ್ರಮಂ

೧. ರಂಗನಾಥಆಚಾರ್ ಅಗ್ನಿಹೋತ್ರಿ ಆಯೋಗ.—

(ದಿನಾಂಕ ೪-೯-೧೯೮೨ ರಂದು ಬೆಂಗಳೂರು ನಗರದ ವಿವೇಕ ನಗರದಲ್ಲಿ ಮತ್ತು ಮಂಡ್ಯ ತಾಲ್ಲೂಕಿನ ಮಳವಳ್ಳಿಯಲ್ಲಿ ದಿನಾಂಕ ೧೫-೮-೧೯೮೨ ರಂದು ನಡೆದ ಗೋಳಿಬಾರ್ ಬಗ್ಗೆ ವಿಚಾರಣೆ ಮಾಡಲು)

ಆಯೋಗವು ಗೋಳಿಬಾರ್ ಅವಶ್ಯವಾಗಿತ್ತು ಹಾಗೂ ಉಪಯೋಗಿಸಿದ ಬಲವು ನ್ಯಾಯ ಸಮ್ಮತವಾಗಿತ್ತು ಎಂದು ನಿರ್ಣಯಕ್ಕೆ ಬಂದಿದೆ. ಆದ್ದರಿಂದ ಮುಂದಿನ ಯಾವುದೇ ಕ್ರಮವು ಅವಶ್ಯ ವಿರುವುದಿಲ್ಲ

೨. ಮಹಮ್ಮದ್ ಆಸಿಫ್ ಆಯೋಗ.—

(ದಿನಾಂಕ ೨೫-೫-೧೯೮೨ ರಂದು ಶಿವಮೊಗ್ಗ ಜಿಲ್ಲೆಯ ನಾಗಸಮುದ್ರದಲ್ಲಿ ಮತ್ತು ದಿನಾಂಕ ೨೬-೯-೧೯೮೨ ರಂದು ಹಾಸನ ಜಿಲ್ಲೆಯ ದೊಡ್ಡಹಳ್ಳಿಯಲ್ಲಿ ನಡೆದ ಗೋಳಿಬಾರ್ ಬಗ್ಗೆ ವಿಚಾರಣೆ ಮಾಡಲು)

ಆಯೋಗವು ದೊಡ್ಡಹಳ್ಳಿಯಲ್ಲಿ ನಡೆದ ಗೋಳಿಬಾರ್‌ನ್ನು ಸಮರ್ಥಿಸಿದೆ ಮತ್ತು ಉಪಯೋಗಿಸಿದಂಥ ಬಲವು ಆ ಸಂದರ್ಭದಲ್ಲಿ ಕನಿಷ್ಠವಾಗಿತ್ತು ಎಂದು ತಿಳಿಸಿದೆ. ಆದುದರಿಂದ ಯಾವುದೇ ಕ್ರಮವು

ಅವಶ್ಯ ಇರುವುದಿಲ್ಲ. ನಾಗ ಸಮುದ್ರದಲ್ಲಿ ನಡೆದ ಗೋಳಿಬಾರಿನಲ್ಲಿ ಒಳಗೊಂಡ ಪೋಲೀಸ್ ಅಧಿಕಾರಿಗಳ ಶಿಸ್ತು ಕ್ರಮ ಕೈಗೊಳ್ಳುವಂತೆ ಆಯೋಗವು ಸೂಚಿಸಿದೆ. ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮವನ್ನು ಜರುಗಿಸಿದಾಗ ಅವರು ವಿಚಾರಣೆಯಲ್ಲಿ ದೋಷದಿಂದ ವಿಮುಕ್ತಿಗೊಂಡರು.

೩. ಎಂ. ಎಸ್. ಬ್ಯಾಡಗಿ ಆಯೋಗ,—

(ದಿನಾಂಕ. ೧೬, ೧೭ ಹಾಗೂ ೧೮ನೇ ಫೆಬ್ರುವರಿಯಂದು ಬಳ್ಳಾರಿಯಲ್ಲಿ ನಡೆದ ಗೋಳಿಬಾರ್ ಬಗ್ಗೆ ವಿಚಾರಣೆ ಮಾಡಲು)

ಆಯೋಗವು ಹಲವಾರು ಪೋಲೀಸ್ ಅಧಿಕಾರಿಗಳ ವಿರುದ್ಧ ಶಿಸ್ತಿನ ವಿಚಾರಣೆ ಪ್ರಾರಂಭಿಸುವಂತೆ ಸೂಚಿಸಿತ್ತು. ವಿಚಾರಣೆಯ ನಂತರ ಇಬ್ಬರು ಮುಖ್ಯ ಪೋಲೀಸ್ ಪೇದೆಗಳನ್ನು ಕೆಲಸದಿಂದ ವಜಾ ಮಾಡಿದೆ ಮತ್ತು ಇಬ್ಬರು ಪೋಲೀಸ್ ಪೇದೆಗಳಿಗೆ ವೇತನವನ್ನು ವೇತನ ಶ್ರೇಣಿಯ ಕನಿಷ್ಠ ಪಟ್ಟಕ್ಕೆ ಇಳಿಸಲಾಯಿತು. ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಇಬ್ಬರು ಪೋಲೀಸ್ ಇನ್ಸ್‌ಪೆಕ್ಟರರ ಮತ್ತು ಒಬ್ಬ ಮುಖ್ಯ ಪೋಲೀಸ್ ಪೇದೆ ಇವರ ವಿರುದ್ಧ ವಿಚಾರಣೆಯು ಪ್ರಗತಿಯಲ್ಲಿ ಇರುತ್ತದೆ. ಒಬ್ಬ ಪೋಲೀಸ್ ಇನ್ಸ್‌ಪೆಕ್ಟರರು ದೋಷದಿಂದ ವಿಮುಕ್ತರಾಗಿದ್ದಾರೆ. ಇನ್ನೊಬ್ಬ ಪೋಲೀಸ್ ಇನ್ಸ್‌ಪೆಕ್ಟರರ ವಿರುದ್ಧ ವಿಚಾರಣೆಯು ಮುಂಗಿದಿದ್ದು ದಂಡವನ್ನು ವಿಧಿಸಲಾಗಿದೆ.

೪. ಎ. ಬಿ. ಮುರಗೋಡ್ ಆಯೋಗ.—

(ದಿನಾಂಕ ೬-೩-೧೯೮೫ರಂದು ಶಿವಮೊಗ್ಗ ಜಿಲ್ಲೆಯ ಹೊನ್ನಾಳಿಯಲ್ಲಿ ನಡೆದ ಪೋಲೀಸ್ ಗೋಳಿಬಾರ್ ಬಗ್ಗೆ ವಿಚಾರಣೆ ಮಾಡಲು).

ಆಯೋಗದ ಶಿಫಾರಸ್ಸಿನ ಮೇರೆಗೆ ಗೋಳಿಬಾರಿನಲ್ಲಿ ಆಹುತಿಯಾದ ಒಬ್ಬನ ಹೆಂಡತಿಗೆ ಪರಿಹಾರ ಧನವನ್ನು ರೂ. ೨೦,೦೦೦ಕ್ಕೆ ಏರಿಸಲಾಯಿತು. ವೃತ್ತ ಪೋಲೀಸ್ ಅಧಿಕಾರಿಯ ವಿರುದ್ಧ ಶಿಸ್ತಿನ ವಿಚಾರಣೆಯನ್ನು ಪ್ರಾರಂಭಿಸಲಾಗಿದೆ. ಕಾರ್ಯನಿರ್ವಾಹಕ ದಂಡಾಧಿಕಾರಿಯವರಿಗೆ ಸಂಬಂಧಿಸಿದ ಕ್ರಿಮಿನಲ್ ಪ್ರೊಸಿಜರ್ ಕೋಡಿನ ವಿಧಿಯಲ್ಲಿ ಹೆಚ್ಚಿನ ತರಬೇತಿಕೊಡಲು ಸೂಚನೆಯನ್ನು ಹೊರಡಿಸಲಾಗಿದೆ.

೫. ಶ್ಯಾಮ ಸುಂದರ ಆಯೋಗ.—

(ದಿನಾಂಕ ೧೩-೫-೧೯೮೩ರಂದು ಮಾಲೂರಿನಲ್ಲಿ ನಡೆದ ಗೋಳಿಬಾರ್‌ನ ಬಗ್ಗೆ ವಿಚಾರಣೆ ಮಾಡಲು)

ಆಯೋಗದ ಶಿಫಾರಸಿನಂತೆ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್ ಅವರ ವಿರುದ್ಧ ಶಿಸ್ತಿನ ವಿಚಾರಣೆಯನ್ನು ಪ್ರಾರಂಭಿಸಲಾಯಿತು. ವಿಚಾರಣೆಯ ನಂತರ ಈ ಅಧಿಕಾರಿಗಳು ಆಪಾದನೆಯಿಂದ ವಿಮುಕ್ತಿಹೊಂದಿದ್ದಾರೆ. ಅದೇ ರೀತಿಯಾಗಿ ಆಗಿನ ಉಪ-ವಿಭಾಗದ ದಂಡಾಧಿಕಾರಿಯು ಸಹ ವಿಚಾರಣೆಯ ನಂತರ ಆಪಾದನೆಯಿಂದ ವಿಮುಕ್ತಿಗೊಂಡಿದ್ದಾರೆ. ಆಗಿನ ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್, ವೃತ್ತ ಪೋಲೀಸ್ ಅಧಿಕಾರಿ ಮತ್ತು ಪೋಲೀಸ್ ಸಬ್-ಇನ್ಸ್‌ಪೆಕ್ಟರು ಇವರುಗಳ ವಿರುದ್ಧ ಇರುವ ಜಂಟಿ ವಿಚಾರಣೆಯು ಪ್ರಗತಿಯಲ್ಲಿ ಇರುತ್ತದೆ.

೬. ಎ. ವಿ. ಬಾಲಸುಬ್ರಮಣ್ಯಂ ಆಯೋಗ.—

(ದಿನಾಂಕ ೨-೮-೧೯೮೩ರಂದು ಕೆ.ಜಿ.ಎಫ್.ನಲ್ಲಿ ನಡೆದ ಗೋಳಿಬಾರ್ ಬಗ್ಗೆ ವಿಚಾರಣೆ ನಡೆಯಿಸಲು.)

ಆಗಿನ ಜಿಲ್ಲಾ ಪೋಲೀಸ್ ಅಧಿಕಾರಿ, ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಮತ್ತು ಇತರೆ ಅಧಿಕಾರಿಗಳ ವಿರುದ್ಧ ಶಿಸ್ತಿನ ವಿಚಾರಣೆಯನ್ನು ನಡೆಸಲಾಯಿತು. ಎಲ್ಲಾ ಅಧಿಕಾರಿಗಳೂ ವಿಚಾರಣೆಯ ನಂತರ ಆಪಾದನೆಯಿಂದ ವಿಮುಕ್ತರಾಗಿದ್ದಾರೆ.

೭. ಆರ್. ಜಿ. ದೇಸಾಯಿ ಆಯೋಗ.—

(ದಿನಾಂಕ ೧೨–೯–೧೯೮೩ರಂದು ಗಂಗಾರಾಂ ಕಟ್ಟಡ ಕುಸಿತದ ಬಗ್ಗೆ ವಿಚಾರಣೆ ಮಾಡಲು.)

ಆಯೋಗದ ಶಿಫಾರಸ್ಸಿನಂತೆ ಅಂದಿನ ಕಾರ್ಪೊರೇಷನ್ ಆಯುಕ್ತರು, ಮೇಲ್ವಿಚಾರಕ ಅಭಿಯಂತರರು ಮತ್ತು ಇತರೆ ಅಧಿಕಾರಿಗಳ ವಿರುದ್ಧ ಶಿಸ್ತಿನ ವಿಚಾರಣೆಯನ್ನು ಪ್ರಾರಂಭಿಸಲಾಯಿತಂ ವಿಚಾರಣೆಮುಗಿದ ನಂತರ ಅಂದಿನ ಮೇಲ್ವಿಚಾರಣೆ ಅಭಿಯಂತರರಿಗೆ ದಂಡವನ್ನು ವಿಧಿಸಲಾಯಿತು. ಇತರೆ ಅಧಿಕಾರಿಗಳ ವಿರುದ್ಧ ವಿಚಾರಣೆಯಂ ಪ್ರಗತಿಯಲ್ಲಿ ಇರುತ್ತದೆ.

೮. ವೆಂಕಟಸ್ವಾಮಿ ಆಯೋಗ.—

(ಸಿವೇಂಟ್ ಹಂಚುವಿಕೆಯಲ್ಲಿ ನಡೆದ ಅವ್ಯವಹಾರದ ಬಗ್ಗೆ ವಿಚಾರಣೆ ಮಾಡಲು.)

ಆಯೋಗದ ವರದಿಯ ಮೇರೆಗೆ ಅವಶ್ಯವಾದ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

೯. ವೆಂಕಟಸ್ವಾಮಿ ಆಯೋಗ.—

(ಅಕ್ಕಿ ಮತ್ತು ಭತ್ತವನ್ನು ಹೊರ ರಾಜ್ಯಗಳಿಗೆ ಸಾಗಿಸುವ ಬಗ್ಗೆ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಕೊಟ್ಟಿ ಬಗ್ಗೆ ವಿಚಾರಣೆ ಮಾಡಲು.)

ಆಯೋಗದ ವರದಿಯಂ ಮೇರೆಗೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಅವಶ್ಯವಿದ್ದಲ್ಲಿ ಕಾನೂನು ಕ್ರಮ ತೆಗೆದುಕೊಳ್ಳಲಂ ನಿರ್ಣಯಿಸಲಾಗಿದೆ. ಕಾನೂನು ಇಲಾಖೆ, ಅಡ್ವೊಕೇಟ್ ಜನರಲ್ ಮತ್ತು ಅಭಿಯೋಗಗಳ ನಿರ್ದೇಶಕರು ಇವರುಗಳನ್ನು ಸಮಾಲೋಚಿಸಿ ಕ್ರಮ ತೆಗೆದುಕೊಳ್ಳಲಾಗುವುದು.

೧೦. ಎನ್. ಡಿ. ವೆಂಕಟೇಶ್ ಆಯೋಗ.—

ಶ್ರೀ ಉಗ್ರ ನರಸಿಂಹಪ್ಪ ಎಂ.ಎಲ್.ಎ. ಅವರನ್ನು ಅಪಹರಿಸಿದ ಬಗ್ಗೆ ವಿಚಾರಣೆ ಮಾಡಲು.)

ಆಯೋಗದ ಶಿಫಾರಸ್ಸಿನಂತೆ ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ ಅವರು ವೃತ್ತ ಪೋಲೀಸ್ ಅಧಿಕಾರಿಯ ವಿರುದ್ಧ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.

೧೧. ಶ್ರೀ ಆರ್. ಜಿ. ವೈದ್ಯನಾಥ ಆಯೋಗ.—

(ದಿನಾಂಕ ೪–೫–೧೯೮೪ರಂದು ಹುಬ್ಬಳ್ಳಿಯಲ್ಲಿ ನಡೆದ ಗೋಳಿಬಾರ್ ಬಗ್ಗೆ.)

ಆಯೋಗವು ಗೋಳಿಬಾರನ್ನು ಸಮರ್ಥಿಸಿದ್ದು ಉಪಯೋಗಿಸಿದ ಬಲವು ಸಮಂಜಸವಾಗಿತ್ತಂ ಎಂದು ತಿಳಿಸಿದೆ. ಆದ್ದರಿಂದ ಯಾವುದೇ ಕ್ರಮವು ಅವಶ್ಯವಿರುವುದಿಲ್ಲ.

೧೨. ಶ್ರೀ ಪಿ. ಎ. ಕುಲ್ಕರ್ಣಿ ಆಯೋಗ.—

(ದಿನಾಂಕ ೧೦–೧೩ ಮಾರ್ಚ್ ೧೯೮೪ರಂದು ಬೆಂಗಳೂರು ನಗರದ ಬೇರೆ ಬೇರೆ ಸ್ಥಳಗಳಲ್ಲಿ ನಡೆದ ಗೋಳಿಬಾರ್ ಬಗ್ಗೆ.)

ಪೋಲೀಸರು ತೆಗೆದುಕೊಂಡ ಕ್ರಮವು ಸಮರ್ಥನಿಯಂವೆಂದು ಆಯೋಗವು ನಿರ್ಣಯಕ್ಕೆ ಬಂದಿದೆ.

೧೩. ಡಿ. ಪಿ. ಹೀರೆಮಂಠ ಆಯೋಗ.—

(ದಿನಾಂಕ ೨೬–೭–೧೯೮೪ರಂದು ಬಿಜಾಪುರ ಜಿಲ್ಲೆಯ ಹುನಗಂದ ಎಂಬಲ್ಲಿ ನಡೆದ ಗೋಳಿಬಾರ್ ಬಗ್ಗೆ)

ಉಪ–ವಿಭಾಗದ ದಂಡಾಧಿಕಾರಿಯು ಮತ್ತು ತಹಸೀಲ್ದಾರರು ಜವಾಬ್ದಾರರೆಂದು ಆಯೋಗವು ತಿಳಿಸಿದೆ. ಉಪ–ವಿಭಾಗದ ದಂಡಾಧಿಕಾರಿ ಮತ್ತು ತಹಸೀಲ್ದಾರರ ವಿರುದ್ಧ ಶಿಸ್ತಿನ ವಿಚಾರಣೆಯಂ ಪ್ರಗತಿಯಲ್ಲಿ ಇದೆ. ಜವಾಬ್ದಾರರಾದ ಪೋಲೀಸ್ ಅಧಿಕಾರಿಗಳ ವಿರುದ್ಧ ಇರುವ ಬೇರೆ ಬೇರೆ ವಿಚಾರಣೆಗಳಃ ಪ್ರಗತಿಯಲ್ಲಿ ಇದೆ.

೧೪. ಆರ್. ಜಿ. ದೇಸಾಯಿ ಆಯೋಗ.—

(ಶ್ರೀ ಮೊಯಿಲಿ ಟೇಪ್ ಪ್ರಕರಣದ ಬಗ್ಗೆ ವಿಚಾರಣೆ ಮಾಡಲು.)

ಆಯೋಗವು ಯಾರನ್ನೂ ತಪ್ಪಿಸ್ಥರೆಂದು ಗುರುತಿಸಿಲ್ಲ.

೧೫. ಬಿ. ಪಿ. ಬೊಪಣ್ಣ ಆಯೋಗ.—

(ಶುದ್ದೀಕರಿಸಿದ ಸ್ಪಿರಿಟನ್ನು ರಾಜ್ಯದ ಹೊರಗಡೆ ಕಳುಹಿಸುವ ಬಗ್ಗೆ)

ಆಯೋಗದ ಶಿಫಾರಸ್ಸಿನ ಪ್ರಕಾರ ಅಬಕಾರಿ ಆಯುಕ್ತರು ಶುದ್ದೀಕರಿಸಿದ ಸ್ಪಿರಿಟನ್ನು ರಫ್ತುಗೊಳಿಸುವ ಬಗ್ಗೆ ಮಾರ್ಪಡಿಸಿದ ಕಾನೂನನ್ನು ರಚಿಸುವಂತೆ ಸೂಚಿಸಲಾಗಿದೆ.

೧೬. ಎಸ್. ವಿ. ಟಲ್‌ಗಂಲ್ ಆಯೋಗ.—

(ದಿನಾಂಕ ೧೯-೧೦-೧೯೮೬ರಂದು ಚೆನ್ನಪಟ್ಟಣದ ಪೋಲೀಸ್ ಠಾಣೆಯಲ್ಲಿ ಶ್ರೀ ದಾದಾಪಿರ ದಸ್ತಗಿರ್ ಸೈಯದ್ ಸಾಬ ಅವರ ಮರಣದ ಬಗ್ಗೆ ಹಾಗೂ ಅಂದು ನಡೆದ ಗೋಳಿಬಾರ್ ಬಗ್ಗೆ ವಿಚಾರಣೆ ಮಾಡಲು.)

ಆಯೋಗದ ಶಿಫಾರಸ್ಸಿನ ಮೇರೆಗೆ ಜವಾಬ್ದಾರರಾದ ೬ ಜನ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ.

೧೭. ಶ್ರೀ ಜೆ. ಚೆನ್ನವೀರಪ್ಪ ಆಯೋಗ.—

(ದಿನಾಂಕ ೨೦-೩-೧೯೮೬ರಂದು ಚಂದ್ರಗುತ್ತಿಯಲ್ಲಿ ನಡೆದ ಘಟನೆಯ ಬಗ್ಗೆ ವಿಚಾರಣೆ ನಡೆಯಿಸಲು.)

ಆಯೋಗದ ಶಿಫಾರಸ್ಸಿನಂತೆ ಆಗಿನ ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್ ವಿರುದ್ಧ ಶಿಸ್ತಿನ ವಿಚಾರಣೆಯನ್ನು ಪ್ರಾರಂಭಿಸಿದ ವಿಚಾರಣೆಯು ಪ್ರಗತಿಯಲ್ಲಿದೆ ಜಿಲ್ಲಾ ದಂಡಾಧಿಕಾರಿಯವರಿಂದ ವಿವರಣೆಯನ್ನು ಪಡೆಯಲಾಯಿತು ಮತ್ತು ಅವರನ್ನು ಆಪಾದನೆಯಿಂದ ವಿಮುಕ್ತಗೊಳಿಸಲಾಗಿದೆ.

೧೮. ಎಸ್. ಟಿ. ಹೂಗಾರ ಆಯೋಗ.—

(ಆಲಂದದಲ್ಲಿ ದಿನಾಂಕ ೨೧-೬-೧೯೮೬ರಂದು ನಡೆದ ಪೋಲೀಸ್ ಗೊಳಿಬಾರ್ ಬಗ್ಗೆ ವಿಚಾರಣೆ ನಡೆಯಿಸಲು.)

ಆಯೋಗದ ಶಿಫಾರಸ್ಸಿನಂತೆ ಸಾಕಷ್ಟು ಪೋಲೀಸ್ ಸಿಬ್ಬಂದಿಯನ್ನು ಹೆಚ್ಚಾಗಿ ಇರಿಸಲು ಮತ್ತು ಹೆಚ್ಚಿನ ಪೋಲೀಸ್ ಹೊರ ಠಾಣೆಗಳನ್ನು ಸೃಷ್ಟಿಸುವಂತೆ ಸೂಚನೆಯನ್ನು ಹೊರಡಿಸಲಾಗಿದೆ. ಯಾವುದೇ ಅಧಿಕಾರಿಯನ್ನು ಅಪರಾಧಿಯೆಂದು ಗುರುತಿಸಿಲ್ಲ.

೧೯. ಡಿ. ಪಿ. ಹಿರೇಮಠ ಆಯೋಗ.—

(ದಿನಾಂಕ ೨೨, ೨೩, ೨೪ ಹಾಗೂ ೨೭-೭-೧೯೮೬ರಂದು ರಾಮನಗರದಲ್ಲಿ ನಡೆದ ಸಂತೆಯ ಗಲಭೆಯ ಪ್ರಕರಣಗಳ ಬಗ್ಗೆ ವಿಚಾರಣೆ ನಡೆಯಿಸಲು.)

ಆಯೋಗವು ಯಾವುದೇ ಅಧಿಕಾರಿಯನ್ನು ಅಪರಾಧಿಯನ್ನಾಗಿ ಗುರುತಿಸಿಲ್ಲ. ಆಯೋಗದ ಶಿಫಾರಸ್ಸಿನ ಮೇರೆಗೆ ಶ್ಲಾಘನೀಯ ಪತ್ರಗಳನ್ನು ಕೆಲವು ಪೋಲೀಸ್ ಅಧಿಕಾರಿಗಳಿಗೆ ನೀಡಲಾಗಿದೆ.

೨೦. ಪಿ. ಕೆ. ಶ್ಯಾಮಸುಂದರ ಆಯೋಗ.—

(ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಅವ್ಯವಹಾರದ ಬಗ್ಗೆ ವಿಚಾರಣೆ ಮಾಡಲು.)

ಆಯೋಗದ ಶಿಫಾರಸ್ಸುಗಳನ್ನು ಕಾನೂನು ಇಲಾಖೆಯು ಸಹಾನುಭೂತಿಯೊಂದಿಗೆ ಪರೀಕ್ಷಿಸಲಾಗುತ್ತಿದೆ.

ಶ್ರೀ ಎಂ. ಪಂಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ, ಇಲ್ಲಿ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ 'ಶೂನ್ಯ' ಎಂದು ಹೇಳಿದ್ದಾರೆ. ಇದರಲ್ಲಿ ಈಗಾಗಲೇ ೨೦ ಆಯೋಗಗಳು ತಮ್ಮ ವರದಿಗಳನ್ನು ಕೊಟ್ಟಿವೆ ಎಂದು ಇಲ್ಲಿ ತಿಳಿಸಿದ್ದಾರೆ. ಈ ಬಗ್ಗೆ ಸಾರ್ವಜನಿಕರಲ್ಲಿ ಏನು ಅಭಿಪ್ರಾಯವಿದೆ ಎಂದರೆ, ಗೋಲಿಬಾರ್ ನಡೆದಾಗ ಇಲ್ಲವೇ ಸ್ಟ್ರೈಕ್‌ಗಳು ನಡೆದಾಗ ಹಾಗೂ ಇತರೇ ಹಂತಗಳಲ್ಲಿ ಇಂತಹ ಆಯೋಗಗಳನ್ನು ಸರ್ಕಾರದವರು ರಚನೆ ಮಾಡುತ್ತಾರೆ, ಆದರೆ ಮುಂದೆ ಅವು ಕೊಟ್ಟ ವರದಿಗಳ ಮೇಲೆ ಕ್ರಮ ಕೈಕೊಳ್ಳುವುದಿಲ್ಲ ಹಾಗೂ ಅವರು ಕೊಟ್ಟ ಸಲಹೆಗಳ ಪ್ರಕಾರ ನಡೆದುಕೊಳ್ಳುವುದಿಲ್ಲ ಎಂದು. ಈ ಮಾತನ್ನು ಸಾರ್ವಜನಿಕರು ಹೇಳುತ್ತಾರೆ. ಈ ಹಿಂದೆ ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ರಚನೆ ಮಾಡಿದ್ದ ಆಯೋಗಗಳು ಕೊಟ್ಟ ವರದಿಯನ್ನು ಸರ್ಕಾರ ಒಪ್ಪಿಲ್ಲ ಎಂದು ಜನರು ಹೇಳುತ್ತಿದ್ದರು. ಈಗ ಪ್ರತಿಯೊಂದಕ್ಕೂ ಆಯೋಗಗಳನ್ನು ರಚನೆ ಮಾಡಲಾಗುತ್ತಿದೆ. ಹೆಚ್ಚಿನ ಆಯೋಗಗಳು ತಮ್ಮ ವರದಿ ಕೊಟ್ಟಿವೆ. ಇದರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಕೆಲವು ವರದಿಗಳಲ್ಲಿ ತಪ್ಪು ಮಾಡಿದ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಶಿಫಾರಸ್ ಮಾಡಿದ್ದಾರೆ ಹಾಗೂ ಕೆಲವು ಪೋಲೀಸ್ ಅಧಿಕಾರಿಗಳನ್ನು ಕೆಲಸದಿಂದ ಡಿಸ್‌ಮಿಸ್ ಮಾಡಿ ಎಂದು ಶಿಫಾರಸ್ ಮಾಡಿದ್ದಾರೆ. ಕೆಲವು ಕಡೆಗಳಲ್ಲಿ ನಡೆದ ಗೋಲಿಬಾರ್‌ಗಳ ಪ್ರಯುಕ್ತ ಸಾರ್ವಜನಿಕರಿಗೆ ಏನು ನಷ್ಟವಾಗಿದೆ, ಆ ಬಗ್ಗೆ ಸೂಕ್ತ ಪರಿಹಾರ ಕೊಡಬೇಕೆಂದು ಶಿಫಾರಸ್ ಮಾಡಿದ್ದರೂ ಸಹ ತಾವು ಆ ಬಗ್ಗೆ ಏನೂ ಕ್ರಮ ಕೈಕೊಳ್ಳಲು ಪ್ರಯತ್ನ ಮಾಡಿಲ್ಲ. ಕೆಲವು ಕಡೆಗಳಲ್ಲಿ ಗಲಾಟೆ ನಡೆದಾಗ ಕೆಲವು ಅಂಗಡಿ ಮತ್ತು ಮನೆಗಳು ಹಾಳಾಗಿರುತ್ತವೆ, ಮತ್ತೆ ಹರಿಜನರ ಮೇಲೆ ಅಟ್ರಾಸಿಟೀಸ್ ನಡೆದಿರುತ್ತದೆ ಅವರ ಮನೆಗಳು ನಾಶವಾಗಿರುತ್ತದೆ, ಇಂತಹ ಸಂದರ್ಭದಲ್ಲಿ ಪರಿಹಾರ ಕೊಡುವ ಬಗ್ಗೆ ವಿಶಿಷ್ಟವಾದಂಥ ಕೋಡ್ ಯಾವುದೂ ಇಲ್ಲ. ಗಲಾಟೆ ನಡೆದ ಜಾಗಕ್ಕೆ ನೀವು ಯಾರಾದರೂ ಹೋಗಿ ನೋಡಿ ನೂರು ರೂಪಾಯಿಗಳು ಇಲ್ಲವೇ ೫೦೦ ರೂಪಾಯಿಗಳ ಪರಿಹಾರ ಕೊಡಿ ಎಂದರೆ ಅಷ್ಟು ಮಾತ್ರ ಪರಿಹಾರವನ್ನು ಅಲ್ಲಿನ ತಹಶೀಲ್‌ದಾರರು ಕೊಡುತ್ತಾರೆ. ಇದು ಸರಿಯಲ್ಲ. ಇಷ್ಟು ನಷ್ಟವಾದರೆ ಇಷ್ಟು ಪರಿಹಾರ ಕೊಡಬೇಕು ಎಂಬ ಬಗ್ಗೆ ಯಾವ ಒಂದು ಕ್ರೈಟೀರಿಯಾವನ್ನು ನಿಗದಿ ಮಾಡಿಲ್ಲ. ಇದಕ್ಕೆ ಯಾವುದೇ ನಿಯಮವನ್ನು ಮಾಡಿಲ್ಲ. ಇದಕ್ಕೆ ತಾವು ಯಾವುದಾದರೂ ಒಂದು ಕ್ರೈಟೀರಿಯಾವನ್ನು ಫಿಕ್ಸ್ ಮಾಡಬೇಕು. ಇದಕ್ಕೆ ಒಂದು ಪ್ರತ್ಯೇಕ ಕೋಡ್ ಜಾರಿಗೆ ತಂದು ನಷ್ಟಕ್ಕೆ ಒಳಗಾದವರಿಗೆ ಪರಿಹಾರ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಅವರ ಮೊದಲನೆಯ ಪೂರಕ ಪ್ರಶ್ನೆಗೆ ಇಷ್ಟೇ ಹೇಳುವುದಕ್ಕೆ ಬಯಸುತ್ತೇನೆ. ಈ ಆಯೋಗಗಳ ವಿಚಾರಣೆ ಪೂರ್ಣಗೊಂಡು, ಅವುಗಳ ವರದಿ ಬಂದಮೇಲೆ, ಅವರು ಕೊಟ್ಟ ಸೂಚನೆಯ ಪ್ರಕಾರ ಕ್ರಮ ಕೈಕೊಳ್ಳುವುದರಲ್ಲಿ ನಮ್ಮ ಸರ್ಕಾರ ಎಂದೂ ಹಿಂದೆ ಬೀಳಲಿಲ್ಲ.

ಈ ಆಯೋಗಗಳು ಫ್ಯಾಕ್ಟ್ ಫೈಂಡಿಂಗ್ ಆಯೋಗಗಳು. ಇವರಿಂ ಎಂದೂ ಇಂತಹ ಶಿಕ್ಷೆ ಮಾಡಿ ಎಂದು ಸೂಚನೆ ಕೊಡುವುದಿಲ್ಲ. ಯಾರದಂ ತಪ್ಪು, ಯಾರದಂ ತಪ್ಪಿಲ್ಲ ಎಂದು ಹೇಳುತ್ತಾರೆ. ಉದಾಹರಣೆಗೆ ಒಂದು ಕಡೆ ಗೋಲೀಬಾರ್ ಆಯಿತು. ೮–೧೦ ಜನರು ಸತ್ತರು ಎಂದು ಇಟ್ಟುಕೊಳ್ಳೋಣ. ಆ ಸಂದರ್ಭದಲ್ಲಿ ಆಯೋಗದ ಕೆಲಸ ಏನೆಂದರೆ, ಅವಶ್ಯಕತೆಗಿಂತ ಹೆಚ್ಚು ಫೋರ್ಸನ್ನು ಪೋಲೀಸರು ಉಪಯೋಗಿಸಿದರೇ ಹೇಗೆ, ಗೋಲೀಬಾರ್ ಮಾಡತಕ್ಕಂಥ ಸಂದರ್ಭ ಇತ್ತೋ ಹೇಗೆ, ಗೋಲೀಬಾರ್ ಮಾಡದೇ ಗಲಭೆಯನ್ನು ಹತೋಟಿಗೆ ತರಬಹುದಿತ್ತೋ ಹೇಗೆ, ಈ ವಿಚಾರವನ್ನು ಆಯೋಗ ನೋಡಿ ತನ್ನ ಅಭಿಪ್ರಾಯ ಕೊಡುತ್ತದೆ. ಪ್ರತಿಯೊಂದು ಆಯೋಗದ ಅಭಿಪ್ರಾಯದ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಇನ್ನು ಕೆಲವು ಆಯೋಗಗಳು ಅಂದರೆ, ಒಂದು ಉದಾಹರಣೆ ಕೊಡುತ್ತೇನೆ. ರೆಕ್ಟಿಫೈಡ್ ಸ್ಪಿರಿಟ್ ರಫ್ತು ಮಾಡಿದ ಬಗ್ಗೆ ಒಂದು ಆರೋಪ ಬಂತು, ಆಗ ಅದಕ್ಕೆ ಒಂದು ಆಯೋಗವನ್ನು ನೇಮಿಸಿದೆವು. ಆ ಆಯೋಗದವರು ಈ ರೀತಿ ರಫ್ತು ಮಾಡಿದ್ದರಿಂದ ಸರ್ಕಾರಕ್ಕೆ ಯಾವುದೇ ರೀತಿ ಹಾನಿಯಾಗಿಲ್ಲ ಲಾಭವಾಗಿದೆ ಇರೆಗ್ಯುಲಾರಿಟೀಸ್ ಇಲ್ಲ ಎಂದು ವರದಿ ಕೊಟ್ಟರು. ಅದರ ಮೇಲೆ ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಬರುವುದಿಲ್ಲ. ಆಮೇಲೆ ವಂನೆ ಬಿದ್ದು ಅವಾಹಂತವಾಯಿತಂ, ಗಂಗರಾಂ ಕಟ್ಟಡ ಬಿದ್ದು ಅನಾಹುತವಾಯಿತು, ನಾವು ಅದರ ಮೇಲೆ ವಿಚಾರಣೆಗೆ ಒಂದು ಆಯೋಗವನ್ನು ನೇಮಕ ಮಾಡಿದೆವು. ಅದರಲ್ಲಿ ಅವರು, ಇಂತಿಂಥ ಅಧಿಕಾರಿ ಅಥವಾ ಇಂತಹ ವ್ಯಕ್ತಿ ಅಥವಾ ಇಂತಹ ಸಂಸ್ಥೆಯ ಅಲಕ್ಷ್ಯತೆ ಇದೆ ಎಂದು ಹೇಳಿದ್ದಾರೆ. ಅದರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಹಿಂದೆ ಮತ್ತೊಂದು ಆಯೋಗ ಆಯಿತು. ಆದರ ಮೇಲೆ ಕ್ರಿಮಿನಲ್ ಕೇಸ್‌ಗೆ ಪ್ರಾಸಿಕ್ಯೂಟ್ ಮಾಡ ಬೇಕು ಎಂದು ಹೇಳಿದರೆ ನಾವು ಪ್ರಾಸಿಕ್ಯೂಷನ್ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಆದುದ ರಿಂದ ಕ್ರಮ ತೆಗೆದುಕೊಳ್ಳಬೇಕಾದಲ್ಲಿ ಹಿಂದಮುಂದೆ ನೋಡಿಲ್ಲ. ಆಮೇಲೆ ಮಾನ್ಯ ಖಾರ್ಗೆಯವರು ಮತ್ತೊಂದು ವಿಚಾರ ಎತ್ತಿದರು, ಕೋಮುವಾರು ಗಲಭೆಯಾದರೆ ಕಾಂಪನ್ಸೇಷನ್ ಕೊಡಲಿಕ್ಕೆ ಯಾವುದೇ ರೀತಿಯ ನಾರ್ಮ್ಸ್ ಇಲ್ಲ, ಮನೆ, ಅಂಗಡಿ ಸುಟ್ಟರುತ್ತದೆ, ಅಂಗಡಿ ಲೂಟಿಯಾಗಿರುತ್ತದೆ, ಇದಕ್ಕೆ ಕಾಂಪನ್ಸೇಷನ್ ಕೊಡಲು ನಾರ್ಮ್ಸ್ ಇಲ್ಲ ಎಂದು ಹೇಳಿದರು. ಆದು ನಿಜ, ಇಂತಹ ಸಂದರ್ಭದಲ್ಲಿ ಯಾವುದೇ ರೀತಿಯ ಕಾಯಿದೆ, ರೂಲ್ ಇಲ್ಲ. ಇದರೂ ಕೂಡ ಸರ್ಕಾರದವರು ನಾರ್ಮ್ಸ್‌ನ್ನು ಮಾಡಿರುತ್ತಾರೆ. ಹಿಂದೆ ಎಷ್ಟು ಕಾಂಪನ್ಸೇಷನ್ ಕೊಡುವಂಥ ಪದ್ಧತಿ ಇತ್ತೋ, ಕಳೆದ ವರ್ಷ ಆದಕ್ಕೆ ಎರಡರಷ್ಟು ಕಾಂಪನ್ಸೇಷನ್ ಹೆಚ್ಚು ಮಾಡಿದ್ದೇವೆ. ನನಗೆ ನೆನಪಿದ್ದಮಟ್ಟಿಗೆ ಹೇಳುವು ದಾದರೆ, ಮೊದಲು ಒಬ್ಬ ವ್ಯಕ್ತಿ ಸತ್ತರೆ ಆತನ ಹತ್ತಿರದ ಸಂಬಂಧಿಕರಿಗೆ ೫ ಸಾವಿರ ರೂಪಾಯಿ ಕೊಡುವಂಥ ಪದ್ಧತಿ ಇತ್ತು, ಅದನ್ನು ೧೦ ರೂಪಾಯಿಗೋ ಅಥವಾ ೧೨ ಸಾವಿರ ರೂಪಾಯಿಗೋ ಅಥವಾ ೧೫ ಸಾವಿರ ರೂಪಾಯಿಗೋ ಏರಿಸಿದ್ದೇವೆ. ಆದೇರೀತಿ ಅಂಗಡಿ ಸುಟ್ಟರೆ ಅದಕ್ಕೆ ಸ್ಕೇಲ್ ಇದೆ, ಆ ಸ್ಕೇಲ್‌ನಂತೆ ಮ್ಯಾಕ್ಸಿಮಂ ಇಷ್ಟು ಎಂದು ನಿಗದಿ ಮಾಡಿ ಅಷ್ಟರವರೆಗೂ ಕೊಡುತ್ತೇವೆ. ಉದಾಹರಣೆಗೆ ಮಾಲೂರಿನಲ್ಲಿ ಒಂದೆರಡು ವರ್ಷದ ಹಿಂದೆ ಕಮ್ಯುನಲ್ ಗಲಭೆಯಾಯಿತು. ಆಗ ಅಲ್ಲಿ ಬ್ಯಾಂಕಿನಿಂದ ಕಡಿವೆ ಬಡ್ಡಿಗೆ ನಾವು ಸಾಲವನ್ನು ಕೊಡಿಸಿದ್ದೇವೆ. ಆದುದರಿಂದ ಈ ಬಗ್ಗೆ ಯಾವುದೇ ರೂಲ್ ಅಥವಾ ಕಾಯಿದೆ ಇಲ್ಲ ಎಂದು ಹೇಳತಕ್ಕಂಥಾದ್ದು ಅಷ್ಟೊಂದು ಸರಿಯಲ್ಲ. ಗಾಯಗೊಂಡ ವರಿಗೆ ಅಥವಾ ಸತ್ತವರ ಮನೆಯವರಿಗೆ. ನಾವು ಹಿಂದೆ ಕೊಡುತ್ತಿದ್ದ ಪರಿಹಾರನಿಧಿಯನ್ನು ಹೆಚ್ಚು ಮಾಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಈ ೨೬ ಪ್ರಕರಣಗಳ ಪೈಕಿ ಕೇವಲ ೨೦ ಪ್ರಕರಣಗಳ ರಿಪೋರ್ಟ್ ಬಂದಿದೆ, ಇನ್ನು ೬ ಪ್ರಕರಣಗಳ ರಿಪೋರ್ಟ್ ಬರಬೇಕಾದ್ದಿದೆ. ಈ ೬ ಪ್ರಕರಣಗಳಲ್ಲಿ ರಿಪೋರ್ಟ್‌ನ್ನು ಅವರು ಎಷ್ಟು ದಿವಸಗಳಲ್ಲಿ ಸಬ್ಮಿಟ್ ಮಾಡುತ್ತಾರೆ, ಅದಕ್ಕೆ ಕಾಲಾವಧಿಯನ್ನು ನಿಗದಿ ಮಾಡಿದ್ದೀರಾ ? ಆದು ಬಂದ ತಕ್ಷಣ ಕ್ರಮ ತೆಗೆದಂಕೊಳ್ಳುತ್ತೀರೋ ಹೇಗೆ ?

ಶ್ರೀ ರಾಮಕೃಷ್ಣ ಹೆಗಡೆ.—ಎಷ್ಟು ದಿವಸದಲ್ಲಿ ಆದರ ರಿಪೋರ್ಟ್ ಬರುತ್ತದೆ ಎಂದು ಹೇಳುವುದಕ್ಕೆ ನನಗೆ ಸಾಧ್ಯವಿಲ್ಲ. ಪ್ರತಿಯೊಂದು ಆಯೋಗವನ್ನು ನೇಮಿಸುವಾಗ ಟರ್ಮ್ಸ್ ಆಫ್ ರೆಫರೆನ್ಸ್ ಜೊತೆಗೆ ಆಯೋಗ ಇಷ್ಟು ದಿವಸದೊಳಗೆ ರಿಪೋರ್ಟನ್ನು ಕೊಡಬೇಕು ಎಂದು ಸೂಚನೆ ಮಾಡುತ್ತೇವೆ. ಸಾಮಾನ್ಯವಾಗಿ ಅಷ್ಟು ದಿವಸದಲ್ಲಿ ಯಾವ ಆಯೋಗವೂ ತನ್ನ ರಿಪೋರ್ಟ್ ಕೊಡತಕ್ಕಂಥಾದ್ದು ಸಾಧ್ಯವಾಗುವುದಿಲ್ಲ. ಆದಕ್ಕಾಗಿ ಆದರ ಅವಧಿಯನ್ನು ಮತ್ತೆ ೬ ತಿಂಗಳು ಅಥವಾ ಒಂದು ವರ್ಷ ವಿಸ್ತರಣೆ ಮಾಡುತ್ತಾ ಹೋಗಂತ್ತೇವೆ. ಜುಡಿಶಿಯಲ್ ಕಮಿಷನ್ ಆಗಿರುವುದರಿಂದ ಇಂತಿಷ್ಟೇ ದಿವಸಗಳಲ್ಲಿ ರಿಪೋರ್ಟ್ ಕೊಡಬೇಕು ಎಂದು ಖಡಾಖಂಡಿತವಾಗಿ ಹೇಳುವುದು ಸಾಧ್ಯವಿಲ್ಲ.

೧೧–೩೦ ಎ.ಎಂ.

ಮತ್ತೊಂದು ವಿಚಾರ ಏನೆಂದರೆ, ಇನ್ನು ಮುಂದೆ ಯಾವುದೇ ರೀತಿಯ ಭ್ರಷ್ಟಾಚಾರ ಅಥವಾ ಸ್ವಜನ ಪಕ್ಷಪಾತ ಹಾಗೂ ಇಂತಹ ವಿಚಾರಕ್ಕೆ ಸಂಬಂಧಪಟ್ಟ ಆಪಾದನೆ ಬಂದರೆ ನಾವು ಜ್ಯುಡಿಷಿಯಲ್ ಕಮಿಷನ್ ನೇಮಿಸುವುದಿಲ್ಲ. ಈ ವಿಚಾರವನ್ನು ಈ ಮನೆಯಲ್ಲಿ ಮೊದಲೇ ನಾನು ಹೇಳಿದ್ದೇನೆ. ಇನ್ನು ಮುಂದೆ ಜ್ಯುಡಿಷಿಯಲ್ ಕಮಿಷನ್ ಅಪಾಯಿಂಟ್ ಮಾಡಿ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡ ತಕ್ಕದ್ದು ಕೇವಲ ಕೋಮುವಾರು ಗಲಭೆಯಲ್ಲಿ ಮಾತ್ರ. ಇಂತಹ ವಿಚಾರದಲ್ಲಿ ಇದನ್ನು ಲೋಕಾಯುಕ್ತ ಅಥವಾ ಉಪಲೋಕಾಯುಕ್ತಕ್ಕೆ ಒಪ್ಪಿಸಲಿಕ್ಕೆ ಬರುವುದಿಲ್ಲ ಇಂತಹ ಸಂದರ್ಭದಲ್ಲಿ ಮಾತ್ರ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇನ್ನೂ ಆರು ಆಯೋಗಗಳ ಕೆಲಸ ಉಳಿದಿದೆ ಎಂದು ಹೇಳಿ ದ್ದೀರಿ, ಕನಿಷ್ಟ ಪಕ್ಷ ಯಾವಯಾವುದು ಉಳಿದಿದೆ ಅದನ್ನಾದರೂ ಹೇಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಹೇಳುತ್ತೇನೆ. ಜಸ್ಟೀಸ್ ಪುಟ್ಟಸ್ವಾಮಿ ಕಮಿಷನ್, ಜಸ್ಟೀಸ್ ಸದಾನಂದಸ್ವಾಮಿ ಕಮಿಷನ್, ಆರ್.ಜಿ. ಸಜ್ಜಾರ್ ಕಮಿಷನ್, ಜಸ್ಟೀಸ್ ಮಂಜರೀಧರರಾವ್

ಕಮಿಷನ್, ಬಿ.ಕೆ. ಸೋಮಶೇಖರ್ ಕಮಿಷನ್, ಜಸ್ಟೀಸ್ ವೆಂಕಟೇಶ್ ಪಾಟೀಲ್ ಕಮಿಷನ್. ಇಷ್ಟು ಉಳಿದಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಜಸ್ಟೀಸ್ ಪುಟ್ಟಸ್ವಾಮಿಯವರು ರಿಸೈನ್ ಮಾಡಿದರು. ಈಗ ಪುನಃ ಅದಕ್ಕೆ ಕಂದೂರ್ ಎನ್ನುವಂಥವರನ್ನು ನೇಮಿಸುತ್ತೀವೆ ಎಂದು ಅನೌನ್ಸ್ ಮಾಡಿರುತ್ತೀರಿ. ಕಂದೂರ್‌ರವರು ಈ ಕಮಿಷನ್‌ಗೆ ಒಪ್ಪಿಕೊಂಡಿರುತ್ತಾರೆಯೇ ಹೇಗೆ ? ಅಥವಾ ಈಗ ತಾವು ಹೇಳಿದ ಪ್ರಕಾರ ಇಂತಹ ಡಿಸ್‌ಪ್ಯೂಟ್ಸ್‌ನ್ನು, ಇಂತಹ ಇನ್ಸ್‌ಡೆಂಟ್ಸ್‌ನ್ನು ಇನ್ನು ಮುಂದೆ ಲೋಕಾಯುಕ್ತಕ್ಕೆ ಒಪ್ಪಿಸಲಿಕ್ಕೆ ಒಪ್ಪಿಸಿಕೊಡುತ್ತೀರಿ. ಇಂತಹವುಗಳ ಬಗ್ಗೆ ಜ್ಯುಡಿಷಿಯಲ್ ಪ್ರೋಬ್ ಮಾಡುವುದಿಲ್ಲ ಎಂದು ಹೇಳಿರುತ್ತೀರಿ ಅದರ ಪ್ರಕಾರ ಇದರ ಬಗ್ಗೆ ಸಹ ಜ್ಯುಡಿಷಿಯಲ್ ಪ್ರೋಬ್ ಕಂಟಿನ್ಯೂ ಮಾಡುತ್ತೀರೋ ಅಥವಾ ಲೋಕಾಯುಕ್ತಕ್ಕೆ ರೆಫರ್ ಮಾಡುತ್ತಿರೋ ?

ಶ್ರೀ ರಾಮಕೃಷ್ಣ ಹೆಗಡೆ.—ಪುಟ್ಟಸ್ವಾಮಿ ಆಯೋಗದ ಕೆಲಸ ಅರ್ಧ ಮುಗಿದಿದೆ. ಇದು ಅರ್ಧ ಮುಗಿಸಿರುವ ಕೇಸ್ ಆಗಿರುವುದರಿಂದ ಇದನ್ನು ಪೂರ್ಣವಾಗಿ ಮುಗಿಸಲಿಕ್ಕೆ ಮತ್ತೊಂದು ಕಮಿಷನ್ ಆಗಲೇ ನೇಮಕ ಮಾಡಿದ್ದೇವೆ ಮತ್ತು ಜಸ್ಟೀಸ್ ಕುದೂರ್‌ರವರು ಕೂಡಾ ಇದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ. ಆದ್ದರಿಂದ ಈ ಕಮಿಷನ್ ಕೆಲಸ ಮುಂದುವರಿಸುತ್ತವೆ.

ಶ್ರೀ ಆರ್. ವೆಂಕಟರಾಮಯ್ಯ.—ಕುದೂರ್‌ರವರು ಬಂದರೆ ನಾನು ಒಪ್ಪುವುದಿಲ್ಲ ಎಂದು ಮಾನ್ಯ ಸಂಬ್ಬಯ್ಯನವರು ಹೇಳಿದ್ದಾರಲ್ಲಾ, ಇದಕ್ಕೆ ತಾವು ಏನು ಹೇಳುತ್ತೀರಿ ? ಕುದೂರ್ ಅವರ ಮಗ ಸಂತೋಷ್ ಹೆಗಡೆಯವರ ಆಫೀಸ್‌ನಲ್ಲಿ ಕೆಲಸ ಮಾಡುತ್ತಿದ್ದಾರಂತೆ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸಂಬ್ಬಯ್ಯನವರಿಗೆ ಅನುಕೂಲ ಆಗತಕ್ಕಂಥ ಅಥವಾ ಅವರಿಗೆ ಮೆಚ್ಚುಗೆಯಾಗತಕ್ಕಂಥ ಕಮಿಷನ್ ನೇಮಿಸುವುದು ನಮಗೆ ಸಾಧ್ಯವಿಲ್ಲ. ಮಾನ್ಯ ಪುಟ್ಟಸ್ವಾಮಿ ಕಮಿಷನ್‌ನವರು ರಾಜೀನಾಮೆ ಕೊಡಕೊಡದು ಎಂದು ಅವರು ಹೇಳಿದರು. ರಾಮಕೃಷ್ಣ ಹೆಗಡೆಯವರ ಮಾತನ್ನು ಕೇಳಿ ಇವರು ರಾಜೀನಾಮೆ ಕೊಟ್ಟರು. ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬಂದಿದ್ದಂಥ ಎಡಿಟೋರಿಯಲ್ ಕೂಡ ರಾಮಕೃಷ್ಣ ಹೆಗಡೆಯವರೆ ಮಾಡಿಸಿದ್ದು ಎಂದು ಹೇಳತಕ್ಕಂಥ ಅಪಾದನೆಯನ್ನು ಜಸ್ಟೀಸ್ ಪುಟ್ಟಸ್ವಾಮಿ ಕಮಿಷನ್ ಮೇಲೆ ಅವರು ಮಾಡಿರುತ್ತಾರೆ. ಮಾನ್ಯ ಸಂಬ್ಬಯ್ಯನವರು ಯಾರ ಮೇಲೆ ಯಾವ ಅಪಾದನೆಯನ್ನು, ಯಾವ ಹೊತ್ತಿಗೆ ಮಾಡುತ್ತಾರೆ ಎಂದು ಹೇಳತಕ್ಕಂಥಾದ್ದನ್ನು ಬ್ರಹ್ಮನಿಂದ ಹೇಳುವುದೂ ಕಷ್ಟವಾಗುತ್ತದೆ.

ಅಧ್ಯಕ್ಷರು.—ದೇವರೇ ಬಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಆದುದರಿಂದ ಈ ವಿಚಾರಕ್ಕೆ ನಾನು ಹೋಗುವುದಿಲ್ಲ. ಜಸ್ಟೀಸ್ ಕುದೂರ್ ಅವರ ಮಗ ಸಂತೋಷ್ ಹೆಗಡೆಯವರ ಫರ್ಮ್‌ನಲ್ಲಿ ಪಾಲುಗಾರ ಎಂದು ಹೇಳುತ್ತಾರೆ. ಸಂತೋಷ್ ಹೆಗಡೆ ಫರ್ಮ್‌ಗೂ, ಸಂತೋಷ್ ಹೆಗಡೆಯವರಿಗೂ ಸಂತೋಷ್ ಹೆಗಡೆಯವರ ಪತ್ನಿಗೂ ಯಾವ ಸಂಬಂಧವೂ ಇಲ್ಲ. ಈಗ ಅವರು ಅಡ್ವೊಕೇಟ್ ಜನರಲ್ ಆಗಿದ್ದಾರೆ, ಅವರು ಬಹಳ ವರ್ಷಗಳ ಹಿಂದೆ ಮಾಡಿದಂಥ ಫರ್ಮ್ ಇದು ಈ ಫರ್ಮ್‌ನಲ್ಲಿ ಕುದೂರ್‌ರವರ ಪುತ್ರ ಕೆಲಸ ಮಾಡುತ್ತಿದ್ದಾರೆ, ಅವರೂ ಒಬ್ಬ ಅಡ್ವೊಕೇಟ್ ಆದರೆ ಈಗ ಅನೇಕ ವರ್ಷಗಳಿಂದ ಸಂತೋಷ ಹೆಗಡೆಯವರಿಗಾಗಲೀ, ಸಂತೋಷ್ ಹೆಗಡೆಯವರ ಹೆಂಡತಿಗಾಗಲೀ-ಇವರೂ ಒಬ್ಬ ಅಡ್ವೊಕೇಟ್—ಈ ಫರ್ಮ್ ಜೊತೆಗೆ ಯಾವುದೇ ಸಂಬಂಧ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾರ ಬಗ್ಗೆ ಸೆಕ್ಷನ್ ಮಾಡುತ್ತಾರೆ ಅವರ ಹೆಸರನ್ನು ವಿತಕ್ಕೆ ಇಲ್ಲಿ ತರುತ್ತೀರಿ ? ಈಗಾಗಲೇ ಅವರ ಬಗ್ಗೆ ಸೆಸ್ಪಿಷನ್ ಕ್ರಿಯೇಟ್ ಆಗಿದೆ. ಇಂತಹ ಒಂದು ಅಟ್‌ಮಾಸ್‌ಫಿಯರ್ ಆದಮೇಲೆ ಈ ರೀತಿ ವಿತಕ್ಕೆ ಮಾಡಂತ್ತೀರಿ ? ಇಂಪಾರ್ಷಿಯಲ್ ಆಗಿ ಜ್ಯುಡಿಷಿಯಲ್ ಎನ್‌ಕ್ವೈರಿ ಆಗಬೇಕೆಂದು ನಿಮ್ಮ ಇಚ್ಛೆ ಇದೆ. A man who can do it impartially, ಅಂತಹವರನ್ನು ಅಪಾಯಿಂಟ್ ಮಾಡಿರಿ. ಈಗಾಗಲೇ ಅವರ ಬಗ್ಗೆ ಸಂಶಯ ವ್ಯಕ್ತ ಪಡಿಸಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಇವರನ್ನು ನೇಮಕ ಮಾಡುವಾಗ ಈ ವಿಚಾರ ಗೊತ್ತಿರಲಿಲ್ಲ. ಇದರಲ್ಲಿ ಸಂಶಯ ಬರತಕ್ಕಂಥ ಯಾವ ದೊಡ್ಡ ವಿಚಾರ ಇದೆ ಎಂದು ನನಗಂತೂ ಅರ್ಥವಾಗುತ್ತಿಲ್ಲ. ಸಂಶಯ ಬರತಕ್ಕಂಥ ಯಾವುದೇ ವಿಚಾರ ಇದರಲ್ಲಿ ಇಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಕಾದೂರ್‌ರವರ ಬಗ್ಗೆ ಅಕ್ಕರೆ ಇಲ್ಲದ್ದಾಗಿದೆ. ಅದು ಕಾಂಪ್ಲಿಕೇಷನ್ ಬರಬಹುದಾದ್ದು ಆಗಿದೆ ಆದ್ದರಿಂದ ಅವರಿಗೆ ಬದಲು ಬೇರೆಯವರನ್ನು ಯಾರನ್ನಾದರೂ ಅಪಾಯಿಂಟ್ ಮಾಡಿ. ಅವರ ಮಗ ಅಲ್ಲಿ ವಕೀಲರು ಸಂತೋಷ ಹೆಗಡೆಯವರು ನಿಮ್ಮ ಮಗ ಭರತ್ ಹೆಗಡೆಯವರಿಗೆ ಲಾಯರ್ ಆಗಿದ್ದಾರೆ. ಆದ್ದರಿಂದ ನೀವು ಅವರಿಗೆ ಬದಲಾಗಿ ಬೇರೆಯವರನ್ನು ನೇಮಕ ಮಾಡಿದರೆ ಅದಕ್ಕೆ ಯಾವ ಸಂಶಯಕ್ಕೂ ಆಸ್ಪದ ಆಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಜಸ್ಟೀಸ್ ಕಾದೂರ್‌ರವರನ್ನು ನಾವು ಕೇಳಿದ್ದಾಯಿತು. ಅದಕ್ಕೆ ಅವರೂ ಒಪ್ಪಿಕೊಂಡು ಈ ಕೆಲಸವನ್ನು ನಾನು ಮಾಡುತ್ತೇನೆಂದು ಆ ಜವಾಬ್ದಾರಿಯನ್ನು ಹೊತ್ತ ಮೇಲೆ ಮತ್ತೆ ಈಗ ನಾವು ಅವರನ್ನು ಬದಲಾಪಣೆ ಮಾಡುವುದು ಸರಿಯಲ್ಲ ಒಂದುವೇಳೆ ಅವರಾಗಿ ಅವರೇ ನಾನು ಈ ಕೆಲಸವನ್ನು ಮಾಡುವುದಿಲ್ಲ ಎಂದು ಹೇಳಿದರೆ ಆಗ ನಾವು ಬೇರೆಯವರನ್ನು ನೇಮಕ ಮಾಡಬಹುದು.

ಕ.ರಾ ರ.ಸಾ. ಸಂಸ್ಥೆಯವರಿಂದ ಆದ ಅಪಘಾತಗಳು ಹಾಗೂ ನೀಡಿದ ಪರಿಹಾರ ಧನ

೧೫೪೧. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಸಾರಿಗೆಯ ಎಷ್ಟು ಬಸ್ಸುಗಳು ಅಪಘಾತಕ್ಕೆ ಒಳಗಾಗಿವೆ ?

ಆ) ಈ ಅಪಘಾತಗಳಿಂದ ಸಾರಿಗೆ ಸಂಸ್ಥೆಗೆ ಆಗಿರುವ ನಷ್ಟವೆಷ್ಟು ?

ಇ) ಈ ಅಪಘಾತಗಳಿಂದ ಮಡಿದಿರುವವರ ಸಂಖ್ಯೆ ಎಷ್ಟು ಮತ್ತು ಸರ್ಕಾರವು ಇವರುಗಳಿಗೆ ಕೊಟ್ಟಿರುವ ಪರಿಹಾರ ಧನದ ಮೊತ್ತವೆಷ್ಟು ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಮಂತ್ರಿಗಳು).—

ಅ) ವರ್ಷ	ಅಪಘಾತಕ್ಕೊಳಗಾದ ಬಸ್ಸುಗಳ ಸಂಖ್ಯೆ
೧೯೮೫-೮೬	೧೮೨೦
೧೯೮೬-೮೭	೧೮೪೯
೧೯೮೭-೮೮	೨೦೪೧

ಆ) ವರ್ಷ	ಮೊತ್ತ (ರೂ.ಗಳಲ್ಲಿ)
೧೯೮೫-೮೬	೨೦೦,೨೦,೫೪೪-೩೪
೧೯೮೬-೮೭	೨೫೦,೩೬,೯೭೮-೫೧
೧೯೮೭-೮೮	೪೨೮,೧೯,೯೩೪-೦೯